ಒ.ಎಸ್.ನಂ:115/2017
ಪಿ.ಡಬ್ಲೂ.2

**<u>ದಿ:25.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು:-</u>**ಪ್ರತಿವಾದಿ ಪರ ಶ್ರೀ.**S.S.H.,** ವಕೀಲರಿಂದ:-

ನಾನು 8 ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ಹೊಸಕೆರೆ ಮಂಡಲ ಪಂಚಾಯಿತಿಯಲ್ಲಿ 1987-88 ರಲ್ಲಿ ಪ್ರಧಾನನಾಗಿದ್ದೆ. ಸದರಿ ಸಮಯಕ್ಕೆ ಹೊಸಕೆರೆ ಮಂಡಲ ಪಂಚಾಯಿತಿ ವ್ಯಾಪ್ತಿಗೆ ಸುಮಾರು 30 ಹಳ್ಳಿಗಳು ಸೇರಿರುತ್ತವೆ. ಸದರಿ 30 ಹಳ್ಳಿಗಳಲ್ಲಿ ಯಾವ ಜಾಗದಲ್ಲಿ ಮನೆಗಳು ಮತ್ತು ರಸ್ತೆಗಳು ಇರುತ್ತವೆ ಎಂದು ತಿಳಿದಿರುತ್ತದೆ. ನಾನು ಈ ಹಿಂದೆ ಈ ದಾವೆ ಬಿಟ್ಟು ಬೇರೆ ಪ್ರಕರಣಗಳಲ್ಲಿ ಸಾಕ್ಷಿ ಹೇಳಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ಕ್ಯಾಸೇನಹಳ್ಳಿ ಪಂಚಾಯಿತಿಯವರು ನೀಡಿರುತ್ತಾರೆ. ವಾದಿಯು ಸಲ್ಲಿಸಿರುವ ಈ ದಾವೆಯ ಬಗ್ಗೆ ಮಾಹಿತಿ ಇರುತ್ತದೆ. ನಾನು ದಾವೆಗೆ ಸಂಬಂದಿಸಿದ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ:ರಸ್ತೆ, ಪಶ್ಚಿಮಕ್ಕೆ:ದಾರಿ, ಉತ್ತರಕ್ಕೆ:ನಾಗೇಂದ್ರಪ್ಪರವರ ಮನೆ ಮತ್ತು ದಕ್ಷಿಣಕ್ಕೆ:ಬಸಣ್ಣರವರ ಮನೆ ಇರುತ್ತದೆ. ದಾವಾ ಆಸ್ತಿಯ ಖಾತೆ ನಂಬರು ಗೊತ್ತಿಲ್ಲ ಹಾಗೂ ಅದರ ವಿಸ್ತೀರ್ಣ ಅಂದಾಜು ಪೂರ್ವ:ಪಶ್ಚಿಮ:50 ಅಡಿ ಮತ್ತು ಉತ್ತರ:ದಕ್ಷಿಣ-30 ಅಡಿ ಇರುತ್ತದೆ. ವಾದಿಗಳು ತಾವು ಓಡಾಡುವ ದಾರಿಯ ಉದ್ದ ಅಗಲ ಪೂರ್ವ:ಪಶ್ಚಿಮ:50 ಅಡಿ ಮತ್ತು ಉತ್ತರ:ದಕ್ಷಿಣ-30 ಅಡಿ ಇರುತ್ತದೆ. ಪ್ರತಿವಾದಿ ಮತ್ತು ವಾದಿಯ ಮನೆಯ ಮದ್ಯೆ ಇರುವ 30 ಗಜ ಉದ್ದ 03 ಗಜ ಅಗಲ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಶೆಡ್ ಹಾಕಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಪಂಚಾಯಿತಿಯವರಿಂದ ಪ್ರತಿವಾದಿಗಳು ಪರವಾನಗಿ ಪಡೆದು ಶೆಡ್ ನ್ನು ಹಾಕಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೂಲ ವಾದಿ ಬಣಕಾರ್ ಈಶ್ವರಪ್ಪ ಮತ್ತು ನಾನು ಬಹಳ ವಿಶ್ವಾಸಿಗರು ಎಂದರೆ ಸರಿ. ಅವರ ವಿಶ್ವಾಸಕ್ಕೆ ಕಟ್ಟುಬಿದ್ದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವೆ ಮತ್ತು ಅದಕ್ಕೆ ಸಂಬಂದಿಸಿದ ದಾಖಲೆಗಳ ಮಾಹಿತಿ ಇಲ್ಲದೇ ಇದ್ದರೂ ಸಹ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು 30 ಗಜ

ಒ.ಎಸ್.ನಂ:115/2017
ಪಿ.ಡಬ್ಲೂ.2

ಉದ್ದ 03 ಗಜ ಅಗಲ ಇರುವ ರಸ್ತೆಯಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಿರುವ ಕಾರಣ ಪ್ರತಿವಾದಿಗಳು ಪ್ರಶ್ನಿಸಿದ್ದಕ್ಕೆ ವಾದಿಗಳು ಈ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ

ಸಿವಿಲ್ ನ್ಯಾಯಾಧೀಶರು, ಜಗಳೂರು